ಮುಖಾಂತರ ಕೊಡುತ್ತಿದ್ದೇವೆ. ಸುಮಾರು Area ದಲ್ಲಿ ಬಂಡಿಯನ್ನು ಇಟ್ಟುಕೊಂಡು ಬಹಳ ಜನರು ಉದ್ಯೋಗವನ್ನು ಮಾಡುತ್ತಾರೆ. ಬಂಡಿಗೂ ಸಹ ಅವಕಾಶವನ್ನು ಕೋಡೋಣವೆಂದು ಎರಡರಲ್ಲಿ ಯಾವುದಾದರೂ ಒಂದನ್ನು ತೆಗೆದುಕೊಳ್ಳಬೇಕೆಂದು ಹೇಳಿ ನಾವು ಈ ಯೋಜನೆಯನ್ನು ತಂದಿದ್ದೇವೆ. ಮಾನ್ಯ ಸದಸ್ಯರು ಇನ್ನು ಹೆಚ್ಚಿನ ಪ್ರಮಾಣದಲ್ಲಿ ಇದನ್ನು ಕೊಡಬೇಕೆಂದು ಹೇಳಿದರು. ಈ ವರ್ಷ ಇದನ್ನು start ಮಾಡಿದ್ದೇವೆ, ಇನ್ನು ಹೆಚ್ಚಿನ demand ಬರುತ್ತಿದೆ. ಇನ್ನು ಹೆಚ್ಚಿನ ಶಾಸಕರು "ನಮಗೆ ಇನ್ನು ಸ್ವಲ್ಪ extra ಕೊಡಿ" ಎಂದು ಕೇಳುತ್ತಿದ್ದಾರೆ. ಅದರ ಬಗ್ಗೆ ಮುಂದಿನ ಸಾಲಿನ ಬಜೆಟ್‌ನಲ್ಲಿ ಪರಿಶೀಲನೆ ಮಾಡುತ್ತೇನೆಂದು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಆರಗ ಜ್ಞಾನೇಂದ್ರ:** ಮಾನ್ಯ ಅಧ್ಯಕ್ಷರೆ, ಆ ಬಂಡಿಗೆ break ಇಲ್ಲ. ನಮ್ಮ ಮಲೆನಾಡಿನಲ್ಲಿ ಬಹಳ ಕಷ್ಟವಾಗುತ್ತದೆ. ಅದಕ್ಕೆ ಒಂದು break ಹಾಕಿಸಿಕೊಡಿ. ಇಲ್ಲದಿದ್ದರೆ ಇದಕ್ಕೆ 2 ರಿಂದ 3 ಸಾವಿರ ರೂಗಳು ಆಗುತ್ತದೆ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ:** ಏನು ದೋಸ್ತಿಗಳದ್ದು ಕುಸ್ತಿ ನಡೆಯುತ್ತಿದೆ. ದೋಸ್ತಿಗಳದ್ದು ಜಂಗಿ ಕುಸ್ತಿ ನಡೆಯುತ್ತಿದೆ. ಅದರ ಬಗ್ಗೆ ನಮಗೂ ಸ್ವಲ್ಪ ಹೇಳಿ.

**ಶ್ರೀ ಎ.ಎಸ್.ಬಸವರಾಜು:** ಮಾನ್ಯ ಅಧ್ಯಕ್ಷರೆ, ಗಾಡಿಗೆ ನೊಗವು ಸಹ ಇಲ್ಲ. ಗಾಡಿಯನ್ನು ಕೊಡುತ್ತೀರಿ, ನೊಗ ಬೇಡವೇ? ನನ್ನ ಪ್ರಕಾರ ಮಹಿಳೆಯು ಗಾಡಿಯನ್ನು ಎಳೆದುಕೊಂಡು ಹೋಗುತ್ತಾಳೆ ಎಂದು ಹೇಳಿದರೆ ಎತ್ತುಗಳನ್ನು ಎಲ್ಲಿ ಕಟ್ಟುತ್ತೀರಿ?

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ:** ದೋಸ್ತಿಗಳದು ಕುಸ್ತಿಯನ್ನು ನಾವು ನೋಡುತ್ತಿದ್ದೇವೆ.

**ಶ್ರೀ ಆರಗ ಜ್ಞಾನೇಂದ್ರ:** ಆಗ ಒಂದು ಸಾರಿ ಮತ್ತು ಈಗ ಒಂದು ಸಾರಿ entertainment ನಿಮಗೆ ಇರಲಿ ಎಂದು ಮಾಡುತ್ತಿದ್ದೇವೆ.

**ಅಧ್ಯಕ್ಷರು:** ಸಚಿವರು ಉತ್ತರ ಹೇಳಿದ್ದಾರಲ್ಲಾ. ಆಯಿತು ಈಗ.

**ರಾಷ್ಟ್ರೀಯ ಕೃಷಿ ವಿಮಾ ಯೋಜನೆ**

126 (720) – ಶ್ರೀ ಸಿಂಧೂರ ಜಿ. ರಾಜಶೇಖರ (ಶಿಗ್ಗಾಂವ್)– ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೋಯಾ ಅವರೆ, ಒಣಮೆಣಸಿನಕಾಯಿ ಹಾಗೂ ಗೋವಿನ ಜೋಳ ಈ ಬೆಳೆಗಳು ರಾಷ್ಟ್ರೀಯ ಕೃಷಿ ವಿಮಾ ಯೋಜನೆಯ

ಮಾರ್ಗಸೂಚಿಯ ಪರಿಮಿತಿಯೊಳಗೆ ಬಾರದೇ ಇರುವುದು ಸರ್ಕಾರದ ಗಮನದಲ್ಲಿದೆಯೇ;

ಆ) ಬಂದಿದ್ದಲ್ಲಿ, ಮಾರ್ಗಸೂಚಿಯ ಪರಿಮಿತಿಯೊಳಗೆ ಸೇರ್ಪಡೆ ಮಾಡುವುದರಿಂದ ರೈತ ಸಮುದಾಯಕ್ಕೆ ಹೆಚ್ಚಿನ ಸೌಲಭ್ಯ ಕಲ್ಪಿಸಲಾಗುವುದೇ;

ಇ) 2006ರ ಹಿಂಗಾರು ಹಂಗಾಮಿನ ಬೆಳೆ ವಿಮಾ ಪ್ರಸ್ತಾವನೆಯನ್ನು ಸಕಾಲದಲ್ಲಿ ಸಲ್ಲಿಸಲು ಅನೇಕ ರೈತರಿಗೆ ಸಾಧ್ಯವಾಗದ ಹಿನ್ನೆಲೆಯಲ್ಲಿ ಈ ಸೌಲಭ್ಯದಿಂದ ವಂಚಿತರಾಗಿರುವ ರೈತರ ಹಿತ ರಕ್ಷಣೆಗಾಗಿ ಕಾಲಾವಕಾಶವನ್ನು ವಿಸ್ತರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಈ) ಹಾಗಿದ್ದಲ್ಲಿ, ಕಾಲಾವಕಾಶವನ್ನು ವಿಸ್ತರಿಸಿರುವುದರಿಂದ ರೈತರಿಗೆ ಹೆಚ್ಚಿನ ಅನುಕೂಲತೆ ಕಲ್ಪಿಸಲು ಕ್ರಮ ಯಾವಾಗ ಕೈಗೊಳ್ಳಲಾಗುವುದು?

ಶ್ರೀ ಬಂಡೆಪ್ಪ ಕಾಶಂಪೂರ್ (ಮಾನ್ಯ ಕೃಷಿ ಸಚಿವರು):

ಅ) ಮೆಣಸಿನಕಾಯಿ (ಮಳೆಯಾಶ್ರಿತ) ಬೆಳೆ ಹೊರತುಪಡಿಸಿ ಉಳಿದ ಬೆಳೆಗಳು ಬೆಳೆ ವಿಮೆ ಯೋಜನೆಯಡಿಯಲ್ಲಿ ಸೇರ್ಪಟ್ಟಿವೆ.

ಆ) ಹೌದು.

ಮೆಣಸಿನಕಾಯಿ (ಮಳೆಯಾಶ್ರಿತ) ಬೆಳೆಗೆ ರೈತರು ಪಾವತಿಸಬೇಕಾದ ವಿಮಾ ಕಂತು ಹೆಚ್ಚಾಗಿದ್ದರಿಂದ, ಇದನ್ನು ಯೋಜನೆಯ ವ್ಯಾಪ್ತಿಯಿಂದ ಹಿಂತೆಗೆದುಕೊಳ್ಳಲಾಗಿದೆ.

ಇ) ಹಂಗಾಮಿನ ಮಧ್ಯದಲ್ಲಿ ಕೊನೆಯ ದಿನಾಂಕವನ್ನು ವಿಸ್ತರಿಸಲು ಸಾಧ್ಯವಿಲ್ಲವೆಂಬುದಾಗಿ ರಾಜ್ಯ ಸರ್ಕಾರದ ಮನವಿಯನ್ನು ಕೇಂದ್ರ ಸರ್ಕಾರವು ತಿರಸ್ಕರಿಸಿದೆ.

ಈ) ಉದ್ಭವಿಸುವುದಿಲ್ಲ.

**ಶ್ರೀ ಸಿಂಧೂರ ಜಿ. ರಾಜಶೇಖರ:** ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಸವಣೂರಿನಲ್ಲಿ ಒಣಮೆಣಸಿನಕಾಯಿ ಬೆಳೆ ಪ್ರಮುಖವಾದ ಬೆಳೆಯಾಗಿರುವುದರಿಂದ ಮಾರ್ಕೆಟ್‌ನಲ್ಲಿ ಮಾತ್ರ ಅದಕ್ಕೆ ಬ್ಯಾಡಗಿ ಹೆಸರು ಇದೆ. ಆದರೆ ಹೆಚ್ಚಿಗೆ ಸಂಖ್ಯೆಯಲ್ಲಿ ನಮ್ಮ ಮೆಣಸಿನಕಾಯಿ ಬೆಳೆಯನ್ನು ಸವಣೂರು ತಾಲ್ಲೂಕಿನಲ್ಲಿ ಬೆಳೆಯುತ್ತಾರೆ. ಮಳೆ ಆಶ್ರಿತ ಬೆಳೆಗಳಿಗೆ ವಿಮೆ ಇಲ್ಲವೆಂದರೆ ರೈತರಿಗೆ ಬಹಳ ಅನ್ಯಾಯವಾಗುತ್ತದೆ. ಈ ಒಂದು ಮಹತ್ವದ

ಬೆಳೆಗೆ ವಿಮೆ ಯೋಜನೆಯನ್ನು ಕಲ್ಪಿಸಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ನಾನು ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಬಂಡೆಪ್ಪ ಕಾಶಂಪೂರ್:** ಬೆಳೆ ವಿಮೆ ಯೋಜನೆಯಲ್ಲಿ ಒಣಮೆಣಸಿನಕಾಯಿ insurance cover ಆಗಿಲ್ಲ. ಏಕೆಂದರೆ, ಇದಕ್ಕೆ ಜಾಸ್ತಿ premium ಇರುವುದರಿಂದ ಈ ಒಂದು ಯೋಜನೆಯಿಂದ ಇದನ್ನು ತೆಗೆದಿದ್ದಾರೆ. rain - fed ವಿರಿಯಾದಲ್ಲಿ ಇದು ಬಹಳ ಅವಶ್ಯಕವಾಗಿದೆ. ಇದು ಕೇಂದ್ರ ಸರ್ಕಾರಕ್ಕೆ ಬರುತ್ತದೆ. ನನ್ನ ಹತ್ತಿರ ಈಗ ಪಟ್ಟಿ ಇದೆ. ಸುಮಾರು ಬೆಳೆ ವಿಮೆಯಲ್ಲಿ ಮುಂಗಾರಿನಲ್ಲಿ 31 ಬೆಳೆಗಳು ಅಂದರೆ ನೀರಾವರಿ ಹಾಗೂ Rain fed ಎರಡು ಸೇರಿ ಒಳಪಟ್ಟಿದೆ. ಇದಕ್ಕೆ ಸಂಬಂಧಪಟ್ಟ premiums ಗಳು ಇವೆ. ಇದಕ್ಕೆ High premium ಇರುವುದರಿಂದ ಈ ಯೋಜನೆಯಿಂದ ಈ ಬೆಳೆಯನ್ನು ತೆಗೆದಿದ್ದಾರೆ. ಮುಂದಿನ ದಿನಗಳಲ್ಲಿ ರೈತರಿಗೆ ನಿಜವಾಗಿಯೂ ಇದರಿಂದ help ಆಗದೇ ಇದ್ದರೆ ಸರ್ಕಾರದ ಪರವಾಗಿ ನಾವು ಕೇಂದ್ರ ಸರ್ಕಾರಕ್ಕೆ ಇದನ್ನು include ಮಾಡಲು ಶಿಫಾರಸ್ಸನ್ನು ಮಾಡುತ್ತೇವೆಂದು ನಾನು ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಸಿಂಧೂರ ಜಿ. ರಾಜಶೇಖರ:** ಹೆಚ್ಚಿಗೆ premiumನ್ನು ರೈತರು ಕಟ್ಟಲು ತಯಾರಿದ್ದಾರೆ. ಇದಕ್ಕೆ ಬೇಡಿಕೆ ಇರುವುದರಿಂದ ತಾವು ಮಾಡಬೇಕು.

**ಶ್ರೀ ಬಂಡೆಪ್ಪ ಕಾಶಂಪೂರ್:** ಇವರ ಬಗ್ಗೆ ವಿಚಾರಣೆ ಮಾಡಿದಾಗ, premium ಬರಲಿಲ್ಲವೆಂದು ಇದನ್ನು ಯೋಜನೆಯಿಂದ ತೆಗೆದಿದ್ದಾರೆ, ಇದರ ಬಗ್ಗೆ ಅಲ್ಲಿನ ರೈತರು ಆಸಕ್ತಿಯನ್ನು ತೋರಿಸಿದರೆ ನಾನು ಶಿಫಾರಸ್ಸು ಮಾಡುತ್ತೇನೆ.

**ಪಡಿತರ ಚೀಟಿ ವಿತರಣೆ**

127 (477) – ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ (ಬೆಳ್ಳಾವಿ) – ಮಾನ್ಯ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ಪಡಿತರ ಚೀಟಿ ಹಂಚಿಕೆಯನ್ನು ಸಮರ್ಪಕವಾಗಿ ಮಾಡಲಾಗಿದೆಯೇ; ಇದುವರೆವಿಗೂ ಹಂಚಿಕೆ ಮಾಡಿರುವ ಬಿ.ಪಿ.ಎಲ್. ಪಡಿತರ ಚೀಟಿಗಳೆಷ್ಟು ;